ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಾಗಾದರೆ ನಾವು ಅಷ್ಟೂ ಜನವೂ ಎದ್ದು ಕೇಳುತ್ತೇವೆ. ನಿನ್ನೆ ಅವರು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದರೆ, ಅದು ಬಂದಾಗ ಬೇಕಾದರೆ ಕೇಳಲಿ.

ಉಪಾಧ್ಯಕ್ಷರು.—ಅವರ ಕ್ಷೇತ್ರವಾಗಿರುವುದರಿಂದ ಕೇಳಿ ಎಂದು ಹೇಳಿದೆ ಅಷ್ಟೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಕೇಳುವುದು ಸರಿಯಾದುದಲ್ಲ. ಅವರ ಸೂಚನೆ ಬಂದ ಮೇಲೆ ಬೇಕಾದರೆ ಕೇಳಲಿ. ಇದು ಕೆಟ್ಟ ಸಂಪ್ರದಾಯವಾಗುತ್ತದೆ. ಇವತ್ತು ಅವರು ಕೇಳುವುದಕ್ಕೆ ಅವಕಾಶ ಇಲ್ಲ.

ಉಪಾಧ್ಯಕ್ಷರು.—ಮಾನ್ಯ ವೇದಾಂತ ಹೆಮ್ಮಿಗೆಯವರೇ ತಾವು ಪ್ರತ್ಯೇಕವಾದ ನೋಟೀಸ್ ಕೊಡಿ. ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ವೇದಾಂತ ಹೆಮ್ಮಿಗೆ.—ಚಾಪಮರಾಜದಲ್ಲಿ...

ಶ್ರೀ ಎಂ. ವೀರಪ್ಪ ಮೊಯ್ಲಿ.—ಅವರು ಹೇಳುವಂಥದ್ದು ರೆಕಾರ್ಡಿಗೆ ಹೋಗಬಾರದು.

(ಗೊಂದಲ)

ಉಪಾಧ್ಯಕ್ಷರು.—ಶ್ರೀಮಾನ್ ವೇದಾಂತ ಹೆಮ್ಮಿಗೆಯವರೇ ತಾವು ದಯಮಾಡಿ ಕುಳಿತುಕೊಳ್ಳಿ. ಅವರು ಹೇಳಿದ್ದನ್ನು ರೆಕಾರ್ಡ್ ಮಾಡಬೇಡಿ. ಮುಂದಿನ ಪ್ರಶ್ನೆ ಶ್ರೀ ಶಿವಾನಂದ ಕೌಜಲಗಿಯವರೆ ತಾವು ಪ್ರಶ್ನೆಯನ್ನು ಕೇಳಿ.

(ಉಪಾಧ್ಯಕ್ಷರ ಆದೇಶದಂತೆ ಶ್ರೀಮಾನ್ ವೇದಾಂತ ಹೆಮ್ಮಿಗೆಯವರು ಮಾತನಾಡಿದ್ದನ್ನು ರೆಕಾರ್ಡ್ ಮಾಡಿಕೊಳ್ಳಲಿಲ್ಲ)

(ಶ್ರೀ ಶಿವಾನಂದ ಸಿವಚ್. ಕೌಜಲಗಿಯವರ ಗೈರು ಹಾಜರಿ)

೨) ಶ್ರೀ ಸಿದ್ಧಗಂಗಾ ಮಠದಲ್ಲಿ ಸ್ವಾಮಿಗಳೀರ್ವರ ಭಿನ್ನಾಭಿಪ್ರಾಯದಿಂದ ಶಾಂತಿ ಭಂಗವಾಗಿರುವುದು.

ಶ್ರೀ ಆರ್. ವೆಂಕಟರಾಮಯ್ಯ.—ಶ್ರೀ ಸಿದ್ಧಗಂಗಾ ಮಠದಲ್ಲಿ ಹಿರಿಯ ಮತ್ತು ಕಿರಿಯ ಸ್ವಾಮಿಗಳ ಮಧ್ಯೆ ಆಡಳಿತದಲ್ಲಿನ ಭಿನ್ನಾಭಿಪ್ರಾಯಗಳಿಂದ ಮಠದಲ್ಲಿ ಶಾಂತಿಭಂಗವಾಗಿರುವ ಹಾಗೂ ಸಾರ್ವಜನಿಕರಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಗೃಹಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು ನಾನು ಈ ಕೆಳಕಂಡ ಹೇಳಿಕೆಯನ್ನು ಓದುತ್ತೇನೆ.

೧೯೮೫ನೇ ಇಸವಿಯಿಂದ ತುಮಕೂರಿನಲ್ಲಿರುವ ಶ್ರೀ ಸಿದ್ಧಗಂಗಾ ಮಠದ ಹಿರಿಯ ಮತ್ತು ಕಿರಿಯ ಸ್ವಾಮೀಗಳಲ್ಲಿ ಮಠದ ಅಧಿಕಾರದ ವಿಚಾರದಲ್ಲಿ ಪರಸ್ಪರ ಭಿನ್ನಾಭಿಪ್ರಾಯಗಳು ತಲೆದೋರಿದ್ದು ವೈಮನಸ್ಸು ಉಂಟಾಯಿತು. ಸದರಿ ಮಠದ ಭಕ್ತಾದಿಗಳಲ್ಲಿ ಕೆಲವರು ಹಿರಿಯ ಸ್ವಾಮಿಗಳವರಿಗೂ ಮತ್ತು ಕೆಲವರು ಕಿರಿಯ ಸ್ವಾಮಿಗಳವರಿಗೂ ತಮ್ಮ ಬೆಂಬಲ ವ್ಯಕ್ತಪಡಿಸುತ್ತಾ ಬಂದಿದ್ದು ಎರಡು ಗುಂಪಾಗಿ, ತಮ್ಮ ತಮ್ಮ ಸ್ವಾಮಿಗಳ ಸ್ಥಾನ ಭದ್ರತೆಗಾಗಿ ಸೆಣಸಾಟ ನಡೆಸುತ್ತಿದ್ದು, ನವೆಂಬರ್ ೧೯೮೫ ರಿಂದ ಇಂದಿನವರೆಗೂ ಪದೇ ಪದೇ ದೊಂಬಿ ಗಲಾಟೆ ಮಾಡುವ ಮೂಲಕ ಸಾರ್ವಜನಿಕ ಶಾಂತಿಗೆ ಭಂಗ ಉಂಟು ಮಾಡುತ್ತಾ ಬಂದಿರುತ್ತಾರೆ.

೧೯೮೫ನೇ ನವೆಂಬರ್ ತಿಂಗಳಿನಿಂದ ಉಭಯ ಸ್ವಾಮಿಗಳವರ ಬೆಂಬಲಿಗರು ನೀಡಿದ ದೂರುಗಳ ಅನ್ವಯ ಕ್ಯಾತಸಂದ್ರ ಪೋಲೀಸ್ ಠಾಣೆಯಲ್ಲಿ ಒಟ್ಟು ೩೭ ಮೊಕದ್ದಮೆಗಳನ್ನು ಇಂದಿನವರೆಗೂ ಉಭಯ ಸ್ವಾಮಿಗಳ ಬೆಂಬಲಿಗರ ಮೇಲೆ ನೋಂದಾಯಿಸಿಕೊಂಡಿರುತ್ತದೆ. ಇಲ್ಲಿಯವರೆಗೂ ಉಭಯ ಸ್ವಾಮಿಗಳ ಬೆಂಬಲಿಗರಿಂದ ಬಂದಿರುವ ಎಲ್ಲಾ ದೂರುಗಳ ಮೇಲೂ ಕಾನೂನು ಪ್ರಕಾರ ಕ್ರಮವನ್ನು ಸ್ಥಳೀಯ ಪೋಲೀಸರು ಜರುಗಿಸಿರುತ್ತಾರೆ. ೧೯೮೭ರ ಫೆಬ್ರುವರಿ ತಿಂಗಳಿನಲ್ಲಿ ಶ್ರೀ ಸಿದ್ಧಗಂಗಾ ಮಠದ ಜಾತ್ರೆಯು ಶಾಂತ ರೀತಿಯಿಂದ ಜರುಗಿತ್ತು,

ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯ ಜಾತ್ರೆ ಹಾಗೂ ದನಗಳ ಜಾತ್ರೆ ೭-೨-೮೮ ರಿಂದ ದಿನಾಂಕ ೧೨-೨-೮೮ರವರೆಗೆ ನಡೆಯಿತು. ಪ್ರತಿ

ವರ್ಷವೂ ಈ ಜಾತ್ರೆ ಸಮಯದಲ್ಲಿ ೧೦ ದಿನಗಳವರೆಗೂ ಪಟಾಕಿ ಸಿಡಿಸುವುದು, ಬಾಣ ಬಿಡುವುದು ಪದ್ಧತಿಯಾಗಿರುತ್ತದೆ. ಅದರಂತೆ ದಿನಾಂಕ ೧೦-೧೦-೮೮ ರಿಂದ ಉತ್ಸವ ಬಂಗಿಯ ನಂತರ ಪಟಾಕಿಯನ್ನು ಸುಡುತ್ತಿದ್ದರು.

ದಿನಾಂಕ ೧೩-೨-೮೮ ರಂದು ಸುಂದರೇಶ ಮತ್ತು ದಿನೇಶ ಎಂಬುವರು ಸಿಡಿಮದ್ದಿನ ಕೆಲವು ಭಾಗಗಳನ್ನು ತಯಾರು ಮಾಡುತ್ತಿರುವಾಗ, ಅದು ಸಿಡಿದು, ಕೋಣೆಯ ಬಾಗಿಲುಗಳು ಪುಡಿಪುಡಿಯಾಗಿ ಹೊರಕ್ಕೆ ಎಸೆಯಲ್ಪಟ್ಟು, ಕೋಣೆಯಲ್ಲಿದ್ದ ಇಬ್ಬರೂ ಸುಟ್ಟು ಗಾಯ ಹೊಂದಿದರು ಮತ್ತು ಹೊರಗಡೆ ವಿಶ್ರಮಿಸುತ್ತಿದ್ದ ಇಬ್ಬರು ಗಾಯ ಹೊಂದಿದರು. ಅವರುಗಳ ಪೈಕಿ, ಪಟಾಕಿ ತಯಾರು ಮಾಡುತ್ತಿದ್ದ ಸುಂದರೇಶ ಎಂಬುವರು (೨೫ ವರ್ಷ) ಅದೇ ದಿನ ರಾತ್ರಿ ೯-೦೦ ಘಂಟೆಯಲ್ಲಿ ಸುಟ್ಟ ಗಾಯಗಳಿಂದ ಮರಣ ಹೊಂದಿದರು. ಈ ಘಟನೆಯಲ್ಲಿ ಗಾಯಗೊಂಡ ನಾಗರಾಜು ಎಂಬ ೮ ವರ್ಷದ ಬಾಲಕನು ದಿನಾಂಕ ೨೩-೨-೮೮ ರಂದು ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ. ಆ ಘಟನೆಯ ಸಂಬಂಧದಲ್ಲಿ ಕ್ಯಾತಸಂದ್ರ ಸ್ಟೋಲೀಸರು, ಸರ್ಕಾರದ ಪರವಾಗಿ ರಾಜಕಮಲ್ ಫೈರ್ ವರ್ಕ್ಸ್, ಆರಸಿಕೆರೆಯ ಪಾಲೀಕರಾದ ಶ್ರೀ ಶಂಕರಾಚಾರ್ಯರವರ ಮೇಲೆ ಕೇಸು ದಾಖಲು ಮಾಡಿಕೊಳ್ಳಲಾಗಿದ್ದು ಆದ ವಿಚಾರಣೆಯಲ್ಲಿದೆ. ಈ ಘಟನೆಯ ಬಗ್ಗೆ ಯಾರೂ ಫಿರ್ಯಾದಿ ಕೊಟ್ಟಿರುವುದಿಲ್ಲ. ಆದರೆ ಇದು, ಸುಮಾರು ಕೋಣೆಯಲ್ಲಿ ತಯಾರು ಮಾಡುತ್ತಿರುವಾಗ ವಸ್ತುಗಳ ಘರ್ಷಣೆಯಿಂದ ಆಕಸ್ಮಿಕವಾಗಿ ಸಂಭವಿಸಿರುವುದೆಂದು ತಿಳಿದು ಬಂದಿರುತ್ತದೆ.

ಇತ್ತೀಚೆಗೆ ಶ್ರೀ ಗೌರಿಶಂಕರ ಸ್ವಾಮಿಗಳು, ತಮ್ಮ ಅನುಯಾಯಿಗಳನ್ನು ಶ್ರೀ ಮಠದ ಆಡಳಿತದ ಕೆಲವು ಹುದ್ದೆಗಳಿಗೆ ನಿಬ್ಬಂದಿಯನ್ನು ನೇಮಿಸಿಕೊಂಡಿರುವುದರ ಬಗ್ಗೆ ಹಿರಿಯ ಸ್ವಾಮಿಗಳ ಬೆಂಬಲಿಗರಿಗೆ ಮಾಜಸುಗರವಾಗಿರುತ್ತದೆ. ದಿನಾಂಕ ೧೯-೨-೮೮ ರಂದು ಹಿರಿಯ ಸ್ವಾಮಿಗಳು ಒಂದು ಪತ್ರಿಕಾ ಸಮ್ಮೇಳನವನ್ನು ನಡೆಸಿ, ದಿನಾಂಕ ೧೭-೨-೮೮ರಂದು ನಡೆದ ಅಹಿತಕರ ಘಟನೆಗೆ, ಕಿರಿಯ ಸ್ವಾಮಿಯವರ ಬೆಂಬಲಿಗರೇ ಕಾರಣರೆಂದು ದೂಷಿಸಿರುತ್ತಾರೆ. ಪಾಗೂ ಕಿರಿಯ ಸ್ವಾಮಿಯವರು ಇಂತಹ ಅನ್ಯಾಯದ ಚಟುವಟಿಕೆಗಳಲ್ಲಿ ಭಾಗವಹಿಸುವುದರಿಂದ ಅವರು ಮಠದ ಉತ್ತರಾಧಿಕಾರಿಯಾಗಲು ಅನರ್ಹರೆಂದೂ ಮತ್ತು ನ್ಯಾಯಯುತವಾದ ಅರ್ಹ ಉತ್ತರಾಧಿಕಾರಿಯನ್ನು ಒಂದು ತಿಂಗಳೊಳಗಾಗಿ ತಾವು ಪ್ರಕಟಿಸುವುದಾಗಿ ತಿಳಿಸಿರುತ್ತಾರೆ.

ಆ ವಿಷಯದಲ್ಲಿ ದಿನಾಂಕ ೨೩-೨-೮೮ರಂದು ಕಿರಿಯ ಸ್ವಾಮಿ ಮತ್ತು ಅವರ ಬೆಂಬಲಿಗರು, ತುಮಕೂರಿನ ಡೆಪ್ಯುಟಿ ಕಮೀಷನರ್ ಕಛೇರಿಯ ಮುಂಭಾಗದಲ್ಲಿ ಧರಣಿ ಕುಳಿತರು. ಅದೇ ದಿನ ಸಾಯಂಕಾಲ ೪-೪೫ಕ್ಕೆ ತುಮಕೂರಿನ ಅಖಿಲ ಭಾರತ ವೀರಶೈವ ಮಹಾಸಭೆಯ ಅಧ್ಯಕ್ಷರಾದ ಶ್ರೀ ಗುರುಬಸ್ಸಪ್ಪ ಮತ್ತು ಇತರರೊಂದಿಗೆ ತುಮಕೂರಿನ ಡೆಪ್ಯುಟಿ ಕಮಿಷನರ್ ರವರಿಗೆ ಮಠದ ವಿಷಯದಲ್ಲಿ ಸರ್ಕಾರವು ಪುನರ್ವಿಮರ್ಶಿಸಬೇಕೆಂದು ಮನವಿಯನ್ನು ಸಲ್ಲಿಸಿದರು. ಧರಣಿ ದಿನಾಂಕ ೮-೩-೮೮ರ ವರೆಗೆ ಮುಂದುವರೆದು, ದಿನಾಂಕ ೯-೩-೮೮ ರಿಂದ ಶ್ರೀ ಜಿ. ಹೆಚ್. ರಾಜಶೇಖರಯ್ಯ, ವಕೀಲರು ಮತ್ತು ಇತರೆ ೭ ಜನರು ಸರದಿಉಪವಾಸ ಸತ್ಯಾಗ್ರಹವನ್ನು ಡೆಪ್ಯುಟಿ ಕಮಿಷನರ್‌ರವರ ಕಛೇರಿಯ ಮುಂಭಾಗದಲ್ಲಿ ಪ್ರಾರಂಭಿಸಿದ್ದು, ಅದು ಇನ್ನೂ ಮುಂದುವರೆದಿದೆ.

ಇಬ್ಬರು ಸ್ವಾಮಿಗಳ ಬೆಂಬಲಿಗರ ಮೇಲೆ ದಾಖಲಾದ ಮೊಕದ್ದಮೆಗಳು ಕೆಳಕಂಡಂತಿವೆ :

ಕಿರಿಯ ಸ್ವಾಮಿಗಳ ಮೇಲೆ ಮತ್ತು ಬೆಂಬಲಿಗರ ಮೇಲೆ

ವರ್ಷ	ಪರದಿ	ಪೋಲೀಸರ ತನಿಖೆ	ನ್ಯಾಯಾಲಯದಲ್ಲಿ
೧೯೮೫	೩	...	೩
೧೯೮೬	೧೧	೧	೧೦
೧೯೮೭	೨	...	೨
೧೯೮೮	೧	೧	...
ಒಟ್ಟು	೧೭	೨	೧೫

ಹಿರಿಯ ಸ್ವಾಮಿಯವರ ಬೆಂಬಲಿಗರ ಮೇಲೆ

ವರ್ಷ	ವರದಿ	ಪೋಲೀಸರ ತನಿಖೆ	ನ್ಯಾಯಾಲಯದಲ್ಲಿ
೧೯೮೫	...	...	..
೧೯೮೬	೧೦	೧ ಪತ್ತೆಯಾಗಿಲ್ಲ	೯
೧೯೮೭	೮	೧	೭
೧೯೮೮	೨	೨	...
ಒಟ್ಟು	೨೦	೪	೧೬

ಇದು ಧಾರ್ಮಿಕ ವಿಷಯವಾದುದರಿಂದ, ಮಠದ ವಿಷಯದಲ್ಲಿ ಸರ್ಕಾರವು ನೇರವಾಗಿ ಪ್ರವೇಶಿಸಲಂ ಸಾಧ್ಯವಿಲ್ಲವಾದುದರಿಂದ, ಮುಖಂಡರುಗಳು ಮತ್ತು ಗೌರವಾನ್ವಿತ ವ್ಯಕ್ತಿಗಳು ಮಧ್ಯ ಪ್ರವೇಶಿಸಿ ಮಠದ ಹಿರಿಯ ಮತ್ತು ಕಿರಿಯ ಸ್ವಾಮೀಜಿಗಳಲ್ಲಿರುವ ಭಿನ್ನಾಭಿಪ್ರಾಯವನ್ನು ಬಗೆಹರಿಸ ಬಹುದಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಅಧ್ಯಕ್ಷರೇ, ಸಿದ್ಧಗಂಗಾ ಕ್ಷೇತ್ರದಲ್ಲಿ ಹಿರಿಯ ಹಾಗೂ ಕಿರಿಯ ಸ್ವಾಮಿಗಳ ಮಧ್ಯೆ ಆಡಳಿತ ಭಿನ್ನಾಭಿಪ್ರಾಯದಿಂದಾಗಿ ಅಲ್ಲಿ ಊಟ ಮಾಡತಕ್ಕ ಸಾವಿರಾರು ವಿದ್ಯಾರ್ಥಿ ಗಳಿಗೆ ತೊಂದರೆಯಾಗಿದೆ. ಸರ್ಕಾರ ಕೂಡಾ ಇಲ್ಲಿಗೆ ಅನುದಾನವನ್ನು ಕೊಡುತ್ತಿದೆ. ಈ ಮಠ ಹಿರಿಯ ಅಥವಾ ಕಿರಿಯ ಸ್ವಾಮಿಗಳ ಸ್ವಂತದ ಆಸ್ತಿ ಏನೂ ಅಲ್ಲ. ಪುರಾಣ ಪ್ರಸಿದ್ಧವಾದಂತಹ ಈ ಕ್ಷೇತ್ರದಲ್ಲಿ ದಿನವೂ ಹೊಡೆದಾಟ, ಬಡಿದಾಟ ಸತ್ಯಾಗ್ರಹ, ಧರಣಿಗಳು ನಡೆಯುತ್ತಲೇ ಇವೆ. ಇಲ್ಲಿ ಚಿಕ್ಕ ಸ್ವಾಮಿಗಳ ಕಾಲಿಗೆ ನಮಸ್ಕರಿಸಿದರೆ ದೊಡ್ಡ ಸ್ವಾಮಿಗಳಿಂದ ಹೊಡೆತ, ದೊಡ್ಡ ಸ್ವಾಮಿಗಳ ಕಾಲಿಗೆ ನಮಸ್ಕರಿಸಿದರೆ ಚಿಕ್ಕ ಸ್ವಾಮಿಗಳ ಕಡೆಯವರಿಂದ ಹೊಡೆತ ತಿನ್ನಬೇಕಾದ ಪರಿಸ್ಥಿತಿ ಬಂದಿದೆ. ಈ ರೀತಿಯಾಗಿ ಅಲ್ಲಿಯ ಹುಡುಗರು ಏಟು ತಿನ್ನಬೇಕಾಗಿದೆ. ಈ ಗಲಾಟೆಯನ್ನು ಅಲ್ಲಿರುವ ದೇವರು ನೋಡುವುದಿಲ್ಲವೇ ಎಂದು ಕೇಳಿದರೆ, ಆ ಸ್ವಾಮಿಗೇ ಇವರು ಮಂಕುಬೂದಿಯನ್ನು ಎರಚಿದ್ದಾರೆ ಎಂದು ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಕಮ್ಯೂನಿಷ್ಟ್ ಪಕ್ಷದವರಿಗೆ ಈ ಮಠದ ವಿಚಾರ ಏಕೆ ಸ್ವಾಮಿ ?

ಶ್ರೀ ಆರ್. ವೆಂಕಟರಾಮಯ್ಯ.—ಒಟ್ಟಿನಲ್ಲಿ ಇದು ನಿಲ್ಲಬೇಕು.

(ಗೊಂದಲ)

ಇಲ್ಲಿ ಯಾರು ಯಾರು ಎದ್ದು ನಿಂತು ಗೊಂದಲ ಮಾಡುತ್ತಿದ್ದಾರೆ ಅವರೆಲ್ಲಾ ಹೋಗಿ ದೊಡ್ಡ ಹಾಗೂ ಚಿಕ್ಕ ಸ್ವಾಮಿಯವರಿಗೆ ರಾಜೀ ಮಾಡಿಸಲಿ. ಈ ಮಠಕ್ಕೆ ಸರ್ಕಾರ ಅನುದಾನ ಕೊಡುತ್ತಾ ಇರುವು ದರಿಂದ ಈ ಇಬ್ಬರ ವ್ಯಾಜ್ಯ ತೀರುವವರೆಗೆ ಸರ್ಕಾರ ಒಬ್ಬ ಒಳ್ಳೆಯ ನಿಷ್ಠಾವಂತ ಲಿಂಗಾಯಿತ ಆಫೀಸರನ್ನು ಅಲ್ಲಿಗೆ ನೇಮಕ ಮಾಡಲಿ.

(ಗೊಂದಲ)

ಗಲಾಟೆಯಲ್ಲಿರುವ ಹಿರಿಯ ಮತ್ತು ಕಿರಿಯ ಸ್ವಾಮಿಗಳಿಗೆ ಅಧಿಕಾರವನ್ನು ಕೊಡದೆ ಸರ್ಕಾರಿ ಅಧಿಕಾರಿ ಆ ಮಠದ ಜವಾಬ್ದಾರಿಯನ್ನು ನೋಡಿಕೊಂಡು ಹೋಗಬೇಕೆಂದು ಹೇಳುತ್ತಿದ್ದೇನೆ. ಯಾರು ತಪ್ಪಿತಸ್ಥರು ಇದ್ದಾರೆ ಕಿರಿಯ ಸ್ವಾಮಿಗಳು ಇರಲಿ, ಹಿರಿಯ ಸ್ವಾಮಿಗಳು ಇರಲಿ ಅವರ ಮೇಲೆ ಕ್ರಮ ತೆಗೆದುಕೊಳ್ಳಿ. ಅಲ್ಲಿ ಲಾ ಅಂಡ್ ಆರ್ಡರ್ ಸರಿಯಾಗಿಲ್ಲ. ಅಲ್ಲಿ ಬಹಳ ಅನ್ಯಾಯವಾಗುತ್ತಿದೆಯೆಂದು ಬಹಳ ಸಂಕಟದಿಂದ ಹೇಳಬೇಕಾಗಿದೆ.

ಶ್ರೀ ಹೆಚ್. ಕೆ. ಪಾಟೀಲ್.—ಇಲ್ಲಿ ಕ್ಲಾರಿಫಿಕೇಶನ್‌ಗೆ ಅವಕಾಶವಿಲ್ಲ. ಅದು ರಿಲಿಜಿಯಸ್ ಮಠ ಇರುವುದರಿಂದ ಸರ್ಕಾರ ಅಲ್ಲಿ ಯಾವುದೇ ರೀತಿಯಲ್ಲಿ ಕೈಹಾಕುವುದು ವಿಹಿತವಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಬಿ. ಲಕ್ಕಪ್ಪ.—ಆ ಮಠದಲ್ಲಿ ಎಲ್ಲಾ ಕೋಮಿಗೆ ಸೇರಿದ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅಲ್ಲಿ ಹಾಸ್ಟಲ್ ನಡೆಸುವುದಕ್ಕೆ ಸರ್ಕಾರ ಅನುದಾನ ಕೊಡುತ್ತಿದೆ. ಅಲ್ಲಿ ಲಾ ಅಂಡ್ ಆರ್ಡರ್ ಸರಿಯಿಲ್ಲದಿರುವುದರಿಂದ ಅಲ್ಲಿರತಕ್ಕ ಮಕ್ಕಳ ವಿದ್ಯಾಭ್ಯಾಸ ಹಾಳಾಗಿದೆ. ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು. ಅಲ್ಲಿ ಉದ್ಬವ ಗಂಗೆ ಇದೆ. ಎಲ್ಲಾ ಜನಾಂಗದವರು ಆ ಗಂಗೆಯಲ್ಲಿ ಸ್ನಾನ ಮಾಡಿ ಸ್ವಾಮಿಗಳನ್ನು ಪೂಜೆ ಮಾಡುತ್ತಾರೆ

ಶ್ರೀ ಎಸ್. ಎಚ್. ಕೌಜಲಗಿ.—ಸರ್ಕಾರ ಅನುದಾನ ಕೊಡುವುದಿಲ್ಲ, ಅದು ಖಾಸಗಿ ಮಠ

ಶ್ರೀ ಬಿ. ಲಕ್ಕಪ್ಪ.—ಸಾವಿರಾರು ವಿದ್ಯಾರ್ಥಿಗಳು ಅಲ್ಲಿ ಕಲಿಯುತ್ತಿದ್ದಾರೆ. ಸರ್ಕಾರ ಹಾಸ್ಟಲ್‌ಗೆ ಅನುದಾನ ಕೊಡುತ್ತಿದೆ. ಹಿರಿಯ ಮತ್ತು ಕಿರಿಯ ಸ್ವಾಮಿಗಳ ಮಧ್ಯೆ ವಿದ್ಯಾರ್ಥಿಗಳನ್ನು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಅಲ್ಲಿ ಪ್ರತಿನಿತ್ಯ ಹೊಡೆದಾಟ ನಡೆಯುತ್ತಿದೆ. ಪೋಲಿಸ್ ರಿಪೋರ್ಟ್ ಪ್ರಕಾರ ಎಷ್ಟೋ ಕೇಸುಗಳು ದಾಖಲಾಗಿವೆ. ಅಲ್ಲಿ ಲಾ ಅಂಡ್ ಆರ್ಡರ್ ಸರಿಯಾಗಿಲ್ಲ. ಮಕ್ಕಳು ಹಾಳಾಗುತ್ತಿದ್ದಾರೆ. ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕಾದದ್ದು ಅತಿಅವಶ್ಯಕವಿದೆ. ಮಕ್ಕಳ ಹಿತದೃಷ್ಟಿಯಿಂದ, ಲಾ ಅಂಡ್ ಆರ್ಡರ್ ದೃಷ್ಟಿಯಿಂದ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು. ಆ ಸಂಸ್ಥೆ ಒಂದೇ ಕೋಮಿಗೆ ಸೇರಿದ ಸ್ವಾಮಿಗಳನ್ನು ಹೊಂದಿದೆ. ಅಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಮೊನ್ನೆ ಜಿಲ್ಲಾ ಪರಿಷತ್ ವಿಾಟಿಂಗ್‌ಗೆ ಹೋಗಿದ್ದಾಗ, ಮಾರ್ಚಿ ೧೬ನೇ ತಾರೀಖಿಂ ವಿದ್ಯಾರ್ಥಿಗಳು ಜಿಲ್ಲಾಪರಿಷತ್ ಅಧ್ಯಕ್ಷರನ್ನು ಮತ್ತು ಪದಸ್ಯರಂಗಳನ್ನು ಭೇಟಯಾಗಿದ್ದರು. ವಿದ್ಯಾರ್ಥಿಗಳ ಹಿತರಕ್ಷಣೆಯಾಗಬೇಕು. ಮಠದ ಹತ್ತಿರ ಲಾ ಅಂಡ್ ಆರ್ಡರ್ ಸರಿಯಿಲ್ಲ. ಇಬ್ಬರು ಸ್ವಾಮಿಗಳ ಮಧ್ಯೆ ಇರತಕ್ಕ ವೈಷಮ್ಯ ಕಡಿಮೆಯಾಗುವವರೆಗೆ ಅಲ್ಲಿ ಶಾಂತಿ ನೆಲಸುವವರೆಗೆ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕೆಂದು ನನ್ನ ಪ್ರಾರ್ಥನೆ. ಇದನ್ನು ಜಾತೀಯತೆಯ ದೃಷ್ಟಿಯಿಂದ ನೋಡುತ್ತಿಲ್ಲ, ಅಲ್ಲಿರತಕ್ಕ ಪರಿಸ್ಥಿತಿ ಸರಿಯಾಗಿ ಅಲ್ಲಿ ಒಂದು ಒಳ್ಳೆಯ ವಾತಾವರಣವನ್ನು ಮೂಡಿಸಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ಸ್ವಾಮಿ ನಾನು ಸರ್ಕಾರದ ಪರವಾಗಿ ಏನು ಹೇಳಬೇಕಾಗಿತ್ತೋ ಅದನ್ನು ಈಗಾಗಲೇ ಹೇಳಿದ್ದೇನೆ, ನಾವೀಗ ಮಧ್ಯೆ ಪ್ರವೇಶ ಮಾಡುವುದಕ್ಕೆ ಬರುವುದಿಲ್ಲ. ನೀವು ಜಿಲ್ಲೆಯ ಶಾಸಕರಿದ್ದೀರಿ, ಇತರೆ ದೊಡ್ಡ ದೊಡ್ಡ ವ್ಯಕ್ತಿಗಳಿದ್ದಾರೆ ಅವರಂಗಳೆಲ್ಲಾ ಕೂಲಿತುಕೊಂಡು ರಾಜಿ ವ್ಯವಹಾರ ಮಾಡಲಿಕ್ಕೆ ನನ್ನ ಆಭ್ಯಂತರವಿಲ್ಲ. ಮಾನ್ಯ ಲಕ್ಕಪ್ಪನವರೇ ರಾಜಿ ವ್ಯವಹಾರ ಮಾಡಲಿಕ್ಕೆ ಪ್ರಯತ್ನ ಮಾಡಲಿ. ಸರ್ಕಾರ ಮಧ್ಯೆ ಪ್ರವೇಶ ಮಾಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ಲಕ್ಕಪ್ಪ.—ಮಕ್ಕಳ ವಿದ್ಯಾಭ್ಯಾಸ ಹಾಳಾಗುತ್ತಿದೆ. ಮುಂದೆ ಅವರು ಬೆಳೆಯುತಕ್ಕಂಥವರು, ಅವರ ಭವಿಷ್ಯ ಹಾಳಾಗುತ್ತಿದೆ. ಅಲ್ಲಿ ಸಾವಿರಾರು ಮಕ್ಕಳು ಅನಾಥರಿದ್ದಾರೆ. ಅವರಿಗೆ ಬೇರೆ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕು.

ಶ್ರೀ ಆರ್. ಎಲ್ ಜಾಲಪ್ಪ.—ಅಧ್ಯಕ್ಷರೇ, ಮಕ್ಕಳಿಂದ ನಮಗೆ ವ್ಯವಸ್ಥೆ ಇಲ್ಲ, ಊಟಕ್ಕೆ ಇಲ್ಲ ಬೇರೆ ಕಡೆಗೆ ಹೋಗುತ್ತೇವೆ ಎಂದು ಅರ್ಜಿಗಳು ಬರುವುದಾದರೆ ಅದನ್ನು ಕನ್ಸಿಡರ್ ಮಾಡುತ್ತೇವೆ. ಆಗ ಬೇರೆ ಕಡೆಗೆ ವ್ಯವಸ್ಥೆ ಮಾಡುತ್ತೇವೆ,

ಶ್ರೀ ಬಿ. ಲಕ್ಕಪ್ಪ.—ಸ್ವಾಮಿ, ನಾವು ಕಣ್ಣಾರೆ ನೋಡಿದ್ದೇವೆ,

(ಗೊಂದಲ)

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಧ್ಯಕ್ಷರೇ.....

ಉಪಾಧ್ಯಕ್ಷರು.—ಎಲ್ಲರೂ ದಯವಿಟ್ಟು ಕೂತುಕೊಳ್ಳಿ. ಎದ್ದೇರೂ ಒಟ್ಟಿಗೆ ಮಾತನಾಡಿದರೆ ಹೇಗೆ ?

ಶ್ರೀ ಬಿ ಲಕ್ಕಪ್ಪ.—ಸೂದಕ್ಕೆ ತೊಂಭತ್ತೊರಷ್ಟು ಜನರ ಅಭಿಪ್ರಾಯ ಏನು ಎಂದರೆ ಅಲ್ಲಿ ಮಠದಲ್ಲಿ ಶಾಂತ ವಾತಾವರಣ ಬರಬೇಕು ಎನ್ನುವುದು.

ಉಪಾಧ್ಯಕ್ಷರು.—ಮಾನ್ಯ ಮಂತ್ರಿಗಳು ಉತ್ತರ ಹೇಳಿದ್ದಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಖಾಸಗೀ ಸಂಸ್ಥೆಯಾಗಲೀ ಅಥವಾ ಯಾವುದೇ ಸಂಸ್ಥೆಯಾಗಲೀ ಕಾನೂನಿನ ಒಂದೇ ಸ್ವಾಮಿ. ಆದಕ್ಕೋಸ್ಕರ ಅಲ್ಲಿ ಮಾನ್ಯ ಜಾಲಪ್ಪನವರು ಇಂಟರ್‌ಫಿಯರ್ ಆಗುವುದಾದರೆ ನಾವು ಸಂತೋಷದಿಂದ ಸ್ವಾಗತಿಸುತ್ತೇವೆ. ಅವರು ಹೋಗಿ ಅಲ್ಲಿರುವ ವ್ಯವಹಾರಗಳನ್ನು ಬಗೆಹರಿಸಿ ಶಾಂತವಾತಾವರಣವನ್ನು ಮೂಡಿಸುವುದಕ್ಕೆ ಪ್ರಯತ್ನಿಸುತ್ತೀರಾ? ನಮಗೆ ಬೇಕಾಗಿರುವುದು ಇಷ್ಟು.

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೇ, ಅದು ನನ್ನ ಕೆಲಸ ಅಲ್ಲ. ನನ್ನ ಕೆಲಸ ಎಂದರೆ ಅವ್ಯವಸ್ಥೆ ಆದಾಗ ಹತೋಟಿಗೆ ತರುವುದು. ರಾಜೀ ವ್ಯವಹಾರ ನನ್ನ ಕೆಲಸ ಅಲ್ಲ. ಸ್ಥಳೀಯ ಮಂತ್ರಿಯಿಂದರು ಇದ್ದಾರೆ, ಅವರು ಹೋಗಿ ಮಾಡಲಿ. ಅದು ನನ್ನ ಕೆಲಸ ಅಲ್ಲ,

ಶ್ರೀ ಬಿ. ಲಕ್ಕಪ್ಪ.—ಸಾಮಾನ್ಯ ಪ್ರಜೆಯ ಮಾನ ಪ್ರಾಣ ಹಾನಿ ಆಗುವಾಗ ರಕ್ಷಣೆ ಕೊಡ ಬೇಕಾದದ್ದು ಮಾನ್ಯ ಗೃಹಸಚಿವರ ಕರ್ತವ್ಯ ಇದೆ.

ಶ್ರೀ ಆರ್. ಎಲ್. ಜಾಲಪ್ಪ.—ರಕ್ಷಣೆ ಕೊಟ್ಟಿದ್ದೇವೆ. ಆದರೆ ಅದನ್ನು ದುರುಪಯೋಗ ಮಾಡಿಕೊಳ್ಳುವುದು ಬೇಡ ಅವರು ಬೀದಿಬೀದಿಯಲ್ಲಿ ಭಾಷಣ ಮಾಡಿ ತಿರುಗುತ್ತಿದ್ದರೆ ದಿನವೂ ನಾನು ಅವರ ಹಿಂದೆ ಓಡಾಡಲಿ ? ರಕ್ಷಣೆ ಕೊಡುತ್ತೇವೆ, ಇಲ್ಲಿಯವರೆಗೆ ರಕ್ಷಣೆ ಕೊಟ್ಟಿದ್ದೇವೆ. ಇನ್ನು ಮುಂದೆಯೂ ಕೊಡುತ್ತೇವೆ.

ಶ್ರೀ ಪಟವರ್ಧನ್.—ಸದನದ ಕೆಲವು ಸದಸ್ಯರು ಗಂಭೀರವಾದಂಥ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಈ ಸದಸ್ಯರ ಕಳಕಳಿ ಏನೆಂದರೆ, ಸಾಮಾಜಿಕ ಸ್ವತ್ತಾಗಿರತಕ್ಕಂಥ ಮಂಡಲ್ಲಿ ಅಲ್ಲಿಯ ವಾತಾವರಣದಲ್ಲಿ ಬಹಳಷ್ಟು ಕಟ್ಟು ಪರಿಣಾಮ ಉಂಟಾದರೆ ಶಾಲೆಗಳ ಮೇಲೆ, ಮಕ್ಕಳ ಮೇಲೂ ಕೂಡ ಅದರ ಪರಿಣಾಮ ಉಂಟಾಗುತ್ತದೆ ಸಾವಿರಾರು ಮಕ್ಕಳು ಓದತಕ್ಕ ಈ ಸಂಸ್ಥೆ ಬಗ್ಗೆ ಸರ್ಕಾರದವರು ಸ್ವಲ್ಪ ಜವಾಬ್ದಾರಿ ವಹಿಸಿ ಅಥವಾ ಬೇರೆಯವರ ಮುಖಾಂತರ ಇಬ್ಬರು ಸ್ವಾಮಿಗಳಲ್ಲಿ ರಾಜೀ ಮಾಡತಕ್ಕಂಥಾದ್ದು, ತನ್ಮೂಲಕ ಈ ಶಿಕ್ಷಣ ಸಂಸ್ಥೆ ಒಳ್ಳೆಯ ಕೆಲಸ ಮಾಡುವುದಕ್ಕೆ ಸಾಧ್ಯವಾಗ ಬಹುದು. ಮಾನ್ಯ ಮುಖ್ಯಮಂತ್ರಿಗಳೂ ಒಂದು ಸಲಹೆಯಿದ್ದರು ಏನೆಂದರೆ ನಾನು ಕೂಡ ಈ ಬಗ್ಗೆ ಗಮನಹರಿಸುತ್ತೇನೆ ಎಂದು ಇದು ಪತ್ರಿಕೆಗಳಲ್ಲಿ ಬಂದಿದೆ. ಆದ್ದರಿಂದ ಮಾನ್ಯಸಚಿವರು ಈ ಬಗ್ಗೆ ಸ್ವಲ್ಪ ಗಮನ ಹರಿಸಿ ಈ ಮಂಡಲದ ಬಗ್ಗೆ ಜವಾಬ್ದಾರಿ ವಹಿಸುವುದು ಒಳ್ಳೆಯದೆಂದು ಏಂಬುದು ನಮ್ಮೆಲ್ಲರ ಅಭಿಪ್ರಾಯ.

ಉಪಾಧ್ಯಕ್ಷರು.—ನಿಮ್ಮ ಸಲಹೆಯನ್ನು ಮಾನ್ಯ ಸಚಿವರು ಪರಿಶೀಲಿಸಲಿ,

೩) ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿರುವ ಹಳ್ಳಿಗಳಲ್ಲಿ ವ್ಯವಸಾಯಕ್ಕೆ ನೀರನ್ನು ಕೊಡದೆ, ನೀರಿನ ಕರ, ಹಾಗೂ ದಂಡವನ್ನು ವಸೂಲಿ ಮಾಡುತ್ತಿರುವ ಬಗ್ಗೆ,

ಶ್ರೀ ಶಿವಾನಂದ ಹಚ್. ಕೌಜಲಗಿ.— ಮಾನ್ಯ ಅಧ್ಯಕ್ಷರೇ, ಮಲಪ್ರಭಾ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಹಳ್ಳಿಗಳಲ್ಲಿ ರೈತರಿಂದ ಅಧಿಕಾರಿಗಳು ಜಮೀನುಗಳಿಗೆ ನೀರನ್ನು ಕೊಡದೆ, ನೀರಿನ ಕರ ಮತ್ತು ದಂಡದ ಬಡ್ಡಿಯನ್ನು ಬಲಾತ್ಕಾರದಿಂದ ವಸೂಲು ಮಾಡಲಿಕ್ಕೆ ಹತ್ತಿರುವರು. ರೈತರು ತಾವು ಜಮೀನುಗಳಿಗೆ ನಿಜವಾಗಿಯೂ ಬಿತ್ತಿಕೊಂಡಿಲ್ಲ, ನೀರಿನ ಕರವನ್ನು ಸಹಾತ್ರ ಕೊಡುವುದಕ್ಕೆ ತಯಾರಿದ್ದರೂ ಕೂಡ ಅಧಿಕಾರಿಗಳು ದಂಡದ ಬಡ್ಡಿಯನ್ನು ಕೂಡಲೇ ಕೊಡಬೇಕೆಂದು ರೈತರಿಗೆ ವಿನಾಕಾರಣ ಬಲಾತ್ಕಾರ ಮಾಡಲಿಕ್ಕೆ ಹತ್ತಿರುತ್ತಾರೆ. ಇದರಿಂದ ಈ ಭಾಗದಲ್ಲಿ ಅಶಾಂತಿ ಆಗಲಿಕ್ಕೆ ಹತ್ತಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಜಿಲ್ಲೆಯ ರಾಯಬಾಗ್‌ಕ್ಕೆ ಭೇಟಿ ಕೊಟ್ಟಾಗ ನೀರಿನ ಕರ ಮತ್ತು ದಂಡದ ಬಡ್ಡಿಯನ್ನು ವಸೂಲು ಮಾಡಬಾರದು ಅದನ್ನು ಮನ್ನಾ ಮಾಡಬೇಕೆಂದು ರೈತರು ತಪ್ಪು ಕಳಕಳಿಯನ್ನು ವಿನಂತಿಸಿಕೊಂಡಾಗ ಮಾನ್ಯ ಮಂತ್ರಿಗಳು, ರೈತರಿಗೆ ಆಗುತ್ತಿರುವ ಅನ್ಯಾಯಗಳನ್ನು ಪ್ರತ್ಯಕ್ಷ ತಿಳಿದುಕೊಂಡು ಹಾಗೂ ಅಧಿಕಾರಿಗಳ ಸಂಗಡ ಸಮಾಲೋಚನೆ ನಡೆಸಿದ ನಂತರ ದಂಡದ ಬಡ್ಡಿಯನ್ನು ಮನ್ನಾ ಮಾಡುವುದಾಗಿ ಆಶ್ವಾಸನೆ ಕೊಟ್ಟಿದ್ದರು. ಮತ್ತು ಈ ಬಗ್ಗೆ ಕೂಡಲೇ ಸರ್ಕಾರದ ಆಜ್ಞೆ ಹೊಂಡಿಸುವುದಾಗಿಯೂ ಸಹ ಆಶ್ವಾಸನೆ ನೀಡಿದ್ದರು. ಆದರೆ ಇನ್ನೂ ಪರೆಗೆ ದಂಡದ ಬಡ್ಡಿ